# SSLC MODEL QUESTION PAPER-3, 2019

## SUBJECT : II LANGUAGE KANNADA

**Time : 2.30hrs.** **Marks : 80**

### ಭಾಗ-ಎ

8x1=8

❖ ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು ?
2. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ?
3. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು ?
4. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ ?
5. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?
6. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ ?
7. ಚೈತ್ರವು ಮಾಡುವ ಕೆಲಸವೇನು ?
8. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

11x2=22

❖ ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

9. ಸಾಮಾನ್ಯವಾದ ಲೋಕವರ್ತನೆ ಯಾವುದು ?
10. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?
11. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?
12. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?
13. ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ ?
14. ಏಣಿ ಹೇಳಿಕೊಳ್ಳುವ ಕಷ್ಟಗಳೇನು ?
15. ಯುಗದ ಆದಿ ತಂದ ಸಂಭ್ರಮವೇನು ?
16. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು ?
17. ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?
18. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?
19. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?

2x3=6

❖ ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ.

20. "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ."
21. "ಶಿವ ಶಿವ ಕಾದಿ ಗೆಲಿದೆವು."

❖ ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.

2x3=6

22. ಬಸವಣ್ಣ
23. ರಮೇಶಗೌಡ ಎಂ.ಕೆ.

1x3=3

❖ ಈ ಕೆಳಗಿನ ಪದ್ಯಭಾಗವನ್ನು ಪೂರ್ಣ ಮಾಡಿ ಬರೆಯಿರಿ.

24. ಏಕಾಂಗಿ ವೀರನಂತೆ.....................
.......................................
.......................................
.................ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು.................................
.............................................
.............................................
..................................ಕಂಡಿತು.

2x4=8

❖ ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

25. ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ.

ಅಥವಾ

ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು ?

26. ಗುರಿ ಪದ್ಯದ ಸಾರಾಂಶ ಬರೆಯಿರಿ.

ಅಥವಾ

ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ?

❖ ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4x1=4

"ಸಾಧಕನಾದವನು ಕನಸುಗಳನ್ನು ಕಾಣಬೇಕು. ಆದರೆ ನಿದ್ರೆಯಲ್ಲಿ ಕಾಣುವ ಕನಸುಗಳಲ್ಲ. ನಿದ್ರೆಯನ್ನೇ ತರಿಸದ ಕನಸುಗಳನ್ನು ಕಾಣಬೇಕು". ಎಂದು ರಾಷ್ಟ್ರಪತಿಗಳಾಗಿದ್ದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಹೇಳಿದ್ದಾರೆ. ದೊಡ್ಡದಾದ ಕನಸನ್ನು ಕಾಣುವುದು ಅಂತಹ ದೊಡ್ಡ ಸಂಗತಿಯಲ್ಲ. ಆ ಕನಸಿನ ಕುರಿತು ಸಣ್ಣ ಪ್ರಯತ್ನ ಮಾಡುವುದೇ ದೊಡ್ಡ ಸಂಗತಿ. ಮನುಷ್ಯ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ಚಂದ್ರ, ಮಂಗಳನ ಮೇಲೆ ಅಡಿ ಇಟ್ಟಿರುವುದು ಯಾರೋ ಕಂಡ ಕನಸಿನ ಫಲದಿಂದ ಹಾಗೂ ಅವರ ಛಲದಿಂದ ಕನಸನ್ನು ನೆರವೇರಿಸಿಕೊಳ್ಳಲು ಆತ್ಮ ಸ್ಥೈರ್ಯ ಇರಬೇಕು. ತನ್ನ ಮೇಲೆ ತನಗೆ ನಂಬಿಕೆ ಇರಬೇಕು. ಅಂದುಕೊಂಡಿದ್ದನ್ನು ಸಾಧಿಸಿಯೇ ತೀರುತ್ತೇನೆ ಎಂಬ ದೃಢ ಸಂಕಲ್ಪವಿರಬೇಕು. ಸಾಧನೆಯ ಹಾದಿಯಲ್ಲಿ ಸೋಲುಂಡರೆ ಕುಗ್ಗಬಾರದು. ಬದಲಿಗೆ ಧೈರ್ಯದಿಂದ ಎದುರಿಸುವ ದೃಢತೆ ಇರಬೇಕು. ಕಾಣುವ ಕನಸು ದೊಡ್ಡದಿದ್ದರೆ ಎದುರಾಗುವ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ.

ಪ್ರಶ್ನೆಗಳು :

27. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಿಳಿಸಿರುವಂತೆ ಎಂತಹ ಕನಸನ್ನು ಕಾಣಬೇಕು ?

28. ಯಾರೋ ಕಂಡ ಕನಸಿನಿಂದ ಮನುಷ್ಯ ಎಲ್ಲಿಗೆ ಅಡಿ ಇಟ್ಟಿದ್ದಾನೆ ?

29. ಕನಸನ್ನು ನನಸು ಮಾಡಲು ಏನಿರಬೇಕು ?

30. ಯಾವಾಗ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ ?

## ಭಾಗ-ಬಿ

❖ ಈ ಕೆಳಗಿನ ಪ್ರತಿಯೊಂದು ಹೇಳಿಕೆಗೂ ತಲಾ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 12x1=12

31. ಗಿರಗಿರ ಪದವು ಈ ಅವ್ಯಯಕ್ಕೆ ಉದಾಹರಣೆ.

ಎ) ಭಾವಸೂಚಕ ಬಿ) ಕ್ರಿಯಾರ್ಥಕ ಸಿ) ಸಾಮಾನ್ಯ ಡಿ) ಅನುಕರಣಾವ್ಯಯ

32. ಷಟ್ಪದಿಯಲ್ಲಿ ಇಷ್ಟು ಸಾಲುಗಳಿರುತ್ತವೆ.

ಎ) ಮೂರು ಬಿ) ಆರು ಸಿ) ನಾಲ್ಕು ಡಿ) ಎರಡು

33. 'ಕೊನರು' ಪದದ ಅರ್ಥ

ಎ) ಒದರು ಬಿ) ಬೆದರು ಸಿ) ಚಿಗುರು ಡಿ) ಕೊಸರು

34. 'ಫಲ' ಪದದ ವಿರುದ್ಧಾರ್ಥಕ ಪದ.
ಎ) ವಿಫಲ ಬಿ) ನಿಷ್ಫಲ ಸಿ) ಸಫಲ ಡಿ) ವ್ಯಾಕುಲ

35. 'ಬೆಂಗಳೂರು' ಪದವು ಈ ನಾಮಸೂಚಕದ ಗುಂಪಿಗೆ ಉದಾಹರಣೆ.
ಎ) ಅಂಕಿತನಾಮ ಬಿ) ಅನ್ವರ್ಥನಾಮ ಸಿ) ಸರ್ವನಾಮ ಡಿ) ರೂಢನಾಮ

36. 'ನೆಲಕ್ಕೆ' ಪದದಲ್ಲಿರುವ ವಿಭಕ್ತಿ ಪ್ರತ್ಯಯ
ಎ) ತೃತೀಯಾ ಬಿ) ಚತುರ್ಥೀ ಸಿ) ಸಪ್ತಮೀ ಡಿ) ಷಷ್ಠೀ

37. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆ.
ಎ) ತತ್ಪುರುಷ ಬಿ) ಕರ್ಮಧಾರಯ ಸಿ) ದ್ವಿಗು ಡಿ) ದ್ವಂದ್ವ

38. 'ಮೊಟ್ಟಮೊದಲು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.
ಎ) ಜೋಡುನುಡಿ ಬಿ) ನುಡಿಗಟ್ಟು ಸಿ) ದ್ವಿರುಕ್ತಿ ಡಿ) ನಾಣ್ಣುಡಿ

39. 'ಗೌರಿಯ ಮುಖಕಮಲ ಅರಳಿದೆ' ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆ.
ಎ) ಉಪಮಾ ಬಿ) ರೂಪಕ ಸಿ) ದೃಷ್ಟಾಂತ ಡಿ) ಉತ್ಪ್ರೇಕ್ಷೆ

40. 'ಪಂಚಾಕ್ಷರಿ' ಪದವು ಈ ಸಂಧಿಗೆ ಉದಾಹರಣೆ.
ಎ) ಸವರ್ಣ ದೀರ್ಘ ಬಿ) ಗುಣ ಸಿ) ಯಣ್ ಡಿ) ವೃದ್ಧಿ

41. 'ಸಂಧ್ಯಾ' ಪದದ ತದ್ಭವ ರೂಪ
ಎ) ಬಂಜೆ ಬಿ) ಗಂಜಿ ಸಿ) ಸಂಜೆ ಡಿ) ಅಂಚೆ

42. 'ನೀನು' ಪದವು ಈ ರೀತಿಯ ಸರ್ವನಾಮವಾಗಿದೆ.
ಎ) ಉತ್ತಮ ಪುರುಷ ಬಿ) ಮಧ್ಯಮಪುರುಷ ಸಿ) ಪ್ರಥಮ ಪುರುಷ ಡಿ) ಅಧಮ ಪುರುಷ

## ಭಾಗ-ಸಿ

43. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1x3=3

* ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ.
* ಮನಸ್ಸಿದ್ದರೆ ಮಾರ್ಗ
* ಅತಿ ಆಸೆ ಗತಿ ಕೇಡು.

44. ನಿಮ್ಮನ್ನು ಗಂಗಾನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಜ್ಞಾನೇಂದ್ರ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದಿರುವ ಸ್ವಾತಂತ್ರ್ಯ ದಿನಾಚರಣೆಯ ವರದಿಯನ್ನು ಪ್ರಕಟಿಸುವಂತೆ ಕೋರಿ 'ಪ್ರಜಾವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. 1x4=4

ಅಥವಾ

ನಿಮ್ಮನ್ನು ಹೆಬ್ಬಾಳದ ನಿವಾಸಿ 'ಕೀರ್ತನಾ' ಎಂದು ಭಾವಿಸಿಕೊಂಡು ಬೇಸಿಗೆ ರಜೆಗೆ ಊರಿಗೆ ಬರುವುದಾಗಿ ತಿಳಿಸಿ ಕೋಲಾರದಲ್ಲಿರುವ ನಿಮ್ಮ ಅಜ್ಜಿ 'ಸುಶೀಲಮ್ಮ' ಎಂಬುವವರಿಗೆ ಪತ್ರ ಬರೆಯಿರಿ.

45. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಪ್ರಬಂಧ ಬರೆಯಿರಿ. 1x4=4

* ನಾನು ಮೆಚ್ಚಿದ ಪುಸ್ತಕ
* ಕ್ರೀಡೆಗಳ ಮಹತ್ವ
* ರಾಷ್ಟ್ರೀಯ ಹಬ್ಬಗಳು.

❄❄❄❄❄